KATK900001842023

# 5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತಿಪಟೂರು.

**ಎಸ್.ಸಿ ಸಂಖ್ಯೆ: 10006/2023**

**ಪ್ರಮಾಣೀಕರಿಸಿದ ದಿನಾಂಕ:** 06.01.2026.

**ಚಾಸಾ.3**

**ಫ್ರಾಸಾ.2**

| | |
|---|---|
| ಹೆಸರು | ಸರ್ವಮ್ಮ |
| ಗಂಡನ ಹೆಸರು | ಪ್ರಹ್ಲಾದ |
| ವಯಸ್ಸು | 55 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ಹುಳಿಯಾರು |

## IN CAMERA PROCEEDINGS

## ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಚಾಸಾ-1 ರವರ ಪರಿಚಯವಿರುತ್ತದೆ. ಅವರು ನಮ್ಮ ಪಕ್ಕದ ಬೀದಿಯಲ್ಲಿ ವಾಸಿಸುತ್ತಾರೆ. ಚಾಸಾ-1 ರವರಿಗೆ 7 ಜನ ಮಕ್ಕಳಿರುತ್ತಾರೆ. ಮೂರು ಜನ ಗಂಡು ಮಕ್ಕಳು, ನಾಲ್ಕು ಜನ ಹೆಣ್ಣು ಮಕ್ಕಳು ಇರುತ್ತಾರೆ. ಚಾಸಾ-1 ರವರು ತನ್ನ ಚಿಕ್ಕ

ಮಗಳು ಸಣ್ಣಮ್ಮ ಹಾಗೂ ಅಳಿಯ ಮಣಿ ರವರೊಂದಿಗೆ ವಾಸ ಮಾಡುತ್ತಿದ್ದಾರೆ. ಚಾಸಾ–1 ಮತ್ತು ಅವರ ಮಗಳು ತಲೆ ಕೂದಲಿನ ವ್ಯಾಪಾರ ಮಾಡುತ್ತಾರೆ. ಮಣಿರವರು ಗಾರೇ ಕೆಲಸ ಮಾಡುತ್ತಾರೆ. ಸಣ್ಣಮ್ಮ ಹಾಗೂ ಮಣಿ ರವರಿಗೆ ಯಾವುದೇ ಮಕ್ಕಳು ಇರುವುದಿಲ್ಲ. ಚಾಸಾ–1 ರವರೊಂದಿಗೆ ತನ್ನ ಮಗಳು ಸಣ್ಣಮ್ಮ ಯಾವಾಗಲು ಜೊತೆಯಲ್ಲಿಯೇ ವಾಸವಿದ್ದರು ಹಾಗೂ ಸಣ್ಣಮ್ಮ ರವರು ಒಂದು ವಾರದಿಂದ ಚಾಸಾ–1 ರವರ ಜೊತೆಯಲ್ಲಿ ಇರಲಿಲ್ಲ. ಮಣಿ ಚಾಸಾ–1 ರವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಬಗ್ಗೆ ನನಗೆ ತಿಳಿದಿರುವುದಿಲ್ಲ. ಚಾಸಾ–1 ರವರು ಸುಮಾರು 2–3 ವರ್ಷಗಳ ಹಿಂದೆ ಗಣೇಶ್ ರವರ ಮನೆಯ ಹತ್ತಿರ ಹಾಲನ್ನು ತರಲು ಬಂದಿದ್ದರು, ಆಗ ಅವರು ಹೊರಗೆ ಕೂತಿದ್ದು, ವಿಚಾರಿಸಲಾಗಿ ಚಾಸಾ–1 ರವರು ಹುಷಾರಿಲ್ಲ ಎಂದು ತಿಳಿಸಿದ್ದು, ನಂತರ ನಾನು ಅವರನ್ನು ಹುಳಿಯಾರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಆಕೆಯನ್ನು ಆಸ್ಪತ್ರೆಯಲ್ಲಿ ಬಿಟ್ಟು ನಾನು ಮರಳಿ ಬಂದಿರುತ್ತೇನೆ. ನಂತರ ನಾನು ಚಾಸಾ–1 ರವರನ್ನು ವಿಚಾರಿಸಿ ಯಾವುದೇ ವಿಷಯವನ್ನು ತಿಳಿದುಕೊಂಡಿರುವುದಿಲ್ಲ. ಚಾಸಾ–1 ರವರು ದೂರನ್ನು ನೀಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಸದರಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಆಡಿಯೋ ವಿಡಿಯೋ ಹೇಳಿಕೆಯನ್ನು ಮಾಡಿಕೊಂಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ವಿ.ಸಿ ಮುಖಾಂತರ ಹಾಜರಿರುವ ಮಣಿ ಈತನನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರು ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ 02.01.2023 ರಂದು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಮಣಿಯು ರಾತ್ರಿ ಸಮಯದಲ್ಲಿ ಲಕ್ಷ್ಮಮ್ಮ ಮತ್ತು ಆಕೆಯ ಮಗಳು ಸಣ್ಣಮ್ಮಳಿಗೆ ಬಾಯಿಗೆ ಬಂದಂತೆ ಬೈದು ಹೊಡೆಯುತ್ತಿದ್ದನು. ಸಣ್ಣಮ್ಮ ಮಣಿಯ ಹಿಂಸೆ ತಾಳಲಾರದೆ ಮನೆ ಬಿಟ್ಟು ಹೋಗಿರುತ್ತಾಳೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 19.10.2022 ರಂದು ಮಧ್ಯಾಹ್ನ 2.00 ಗಂಟೆಯ ಸಮಯದಲ್ಲಿ ನಾನು ಮತ್ತು ಪಕ್ಕದ ಮನೆಯವರಾದ ಚಾಸಾ-2 ಇಬ್ಬರು ಮನೆಯ ಹತ್ತಿರ ಇದ್ದಾಗ ಲಕ್ಷ್ಮಮ್ಮ ರವರು ನಮ್ಮ ಹತ್ತಿರ ಬಂದು ನಮಗೆ ದಿಃ 18.10.2022 ರಂದು ರಾತ್ರಿ 10.30 ಗಂಟೆಯ ಸಮಯದಲ್ಲಿ ನಾನು ಮತ್ತು ನನ್ನ ಅಳಿಯ ಇಬ್ಬರು ಊಟ ಮಾಡಿದ ನಂತರ ರಾತ್ರಿ 11.00 ಗಂಟೆಯ ಸಮಯದಲ್ಲಿ----------------- ಯಾರಿಗಾದರೂ ಹೇಳಿದರೆ ನಿನ್ನನ್ನು ಸಾಯಿಸುತ್ತೇನೆಂದು, ಪ್ರಾಣ ಬೆದರಿಕೆ ಹಾಕಿ ಬಲವಂತವಾಗಿ ಮನೆಯಲ್ಲಿ ಕೂಡಿ ಹಾಕಿರುವ ಮಣಿ ರವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿ.ಪಿ-2** ಎಂದು ಗುರುತಿಸಲಾಯಿತು.

ನನಗೆ ಸದರಿ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರು ಸಹಃ ಹಾಗೂ ನಿ.ಪಿ-2 ರಂತೆ ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದರೂ ಸಹಃ ಆರೋಪಿತನೊಂದಿಗೆ ರಾಜಿ

ಮಾಡಿಕೊಂಡು ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯ ಆಡಿಯೋ-ವಿಡಿಯೋ ಸಿ.ಡಿಯನ್ನು ಪ್ಲೇ ಮಾಡಲು ಅನುಮತಿ ಕೋರಿದ್ದು, ಸದರಿ ಆಡಿಯೋ-ವಿಡಿಯೋ ಸಿ.ಡಿಯನ್ನು ಪ್ಲೇ ಮಾಡಲು ನ್ಯಾಯಾಲಯದಲ್ಲಿ ಯಾವುದೇ ಸಲಕರಣೆಗಳು ಇಲ್ಲದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**